ಸಾಕ್ಷಿಯನ್ನು ಪ್ರಮಾಣಿಕರಿಸಿದ ದಿನಾಂಕಃ 07.03.2026

ಪಾಟೀ ಸವಾಲು ವಾದಿ ಪರ ವಕೀಲರು ಏನು ಇರುವುದಿಲ್ಲ ಎಂದು ನುಡಿದಿರುತ್ತಾರೆ.

ಮುಂದುವರೆದ ಪಾಟೀಸವಾಲು **1** ನೇ ಪ್ರತಿವಾದಿ ಪರ ಶ್ರೀ ಕೆ ವಿ ಎ ವಕೀಲರಿಂದಃ

1 ನೇ ವಾದಿ ಲಕ್ಷ್ಮಣಗೌಡರವರೊಂದಿಗೆ ನನ್ನ ಸಂಬಂದ ಚೆನ್ನಾಗಿರುವುದಿಲ್ಲ. 2012-2013 ರಿಂದ ನಮ್ಮ ಕುಟುಂಬದೊಂದಿಗೆ ಅವರ ಸಂಬಂದ ಚೆನ್ನಾಗಿರುವುದಿಲ್ಲ. 1 ನೇ ವಾದಿಯ ತಂದೆ ಮಾಸನಗೌಡರವರು ಮತ್ತು ನನ್ನ ತಂದೆ ಕನಕನಗೌಡರವರು ಜೀವಂತ ಇದ್ದ ಕಾಲದಲ್ಲಿ ಅವರಿಬ್ಬರ ಸಂಬಂದ ಅಷ್ಟಕಷ್ಟೆ ಇತ್ತು. ಅವರಿಬ್ಬರ ಮದ್ಯೆ ಪ್ರಕರಣ ನಡೆದ ಬಗ್ಗೆ ನನಗೆ ಮಾಹಿತಿ ಇಲ್ಲ. ಓ ಎಸ ನಂ. 155/2010 ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ. ಕನಕನಗೌಡ ತಂದೆ ಭೀಮನಗೌಡ ನನ್ನ ತಂದೆ ಇರುತ್ತಾರೆ. ರಾಮನಗೌಡ ತಂದೆ ಮಾಸನಗೌಡ , ದೊಡ್ಡನಗೌಡ ತಂದೆ ಮಾಸನಗೌಡ , ಕಲ್ಲನಗೌಡ ತಂದೆ ಮಾಸನಗೌಡ ರವರು ನನ್ನ ಚಿಕ್ಕಪ್ಪನ ಮಕ್ಕಳು ಇರುತ್ತಾರೆ. ಓ ಎಸ ನಂ. 155/2010 ಪ್ರಕರಣದ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅವುಗಳನ್ನು ಪಡೆದ ನಂತರ ಅವುಗಳ ಬಗ್ಗೆ ಮಾಹಿತಿ ತಿಳಿದುಕೊಂಡಿರುತ್ತೇನೆ.

ಓ ಎಸ ನಂ. 155/2010 ಪ್ರಕರಣವನ್ನು 1 ನೇ ವಾದಿ ಲಕ್ಷ್ಮಣಗೌಡರು ಪಿತ್ರಾರ್ಜಿತ ಆಸ್ತಿಗಳಲ್ಲಿ ಭಾಗ ಕೋರಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯನ್ನು ದಿನಾಂಕ 11.08.2010 ರಂದು ರಾಜಿ ಅರ್ಜಿ ಸಲ್ಲಿಸುವ ಮೂಲಕ ರಾಜಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ಈ ಪ್ರಕರಣದ 1 ಮತ್ತು 5 ನೇ ದಾವಾ ಸ್ವತ್ತುಗಳಲ್ಲಿ ಭಾಗ ಕೋರಿ ಸಲ್ಲಿಸಿದ್ದರು ಎಂದರೆ ನನಗೆ ಮಾಹಿತಿ ಇಲ್ಲ. ನಿಪಿ-93 ರಂತೆ ಮೇಲ್ಕಂಡ ದಾವೆ ರಾಜಿ ಡಿಕ್ರಿ ಆಗಿರುತ್ತದೆ ಎಂದರೆ

ಸರಿ. ಅಂದಿನಿಂದಲೂ ನಮ್ಮ ಕುಟುಂಬದವರು ಮತ್ತು ಲಕ್ಷ್ಮಣಗೌಡರ ಕುಟುಂಬದವರು ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿದ್ದೇವೆ ಎಂದರೆ ಸರಿ.

ಓ ಎಸ ನಂ. 354/2016 ರ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸದರಿ ದಾವೆಯನ್ನು ಲಕ್ಷ್ಮಣಗೌಡರು , ಶಂಕ್ರವ್ವ , ಬಸನಗೌಡ , ರಾಜನಗೌಡ ರವರು ಸೇರಿ ಮಾಡಿಕೊಂಡಿರುತ್ತಾರೆ. ಸದರಿ ದಾವೆಯನ್ನು ಸರ್ವೆ ನಂ. 9/4 ಮತ್ತು ಸರ್ವೆನಂ. 9/4 ಎ ಮತ್ತು ಸರ್ವೆನಂ. 21 ಹಿಸ್ಸಾ 3 , ಸರ್ವೆ ನಂ. 84 ಹಿಸ್ಸಾ 2 , ಸರ್ವೆ ನಂ. 84 ಹಿಸ್ಸಾ 3, ಸರ್ವೆ ನಂ. 84 ಹಿಸ್ಸಾ 4, ಸರ್ವೆ ನಂ. 84 ಹಿಸ್ಸಾ 5 ಕುರಿತು ಸಲ್ಲಿಸಿರುತ್ತಾರೆ. ಸದರಿ ದಾವೆಯಲ್ಲಿ ನಾನು ಕೂಡಾ ಪಕ್ಷಗಾರ ಇದ್ದೆನು. ಸದರಿ ದಾವೆಯಲ್ಲಿ ನನ್ನ ತಾಯಿ ಕೂಡಾ ಪಕ್ಷಗಾರರಾಗಿದ್ದರು. ಈ ದಾವೆಯ 1 ರಿಂದ 6 ನೇ ದಾವಾ ಆಸ್ತಿಗಳು ನಮ್ಮ ಕುಟುಂಬದ ಆಸ್ತಿಗಳು ಅಲ್ಲದೆ ಇದ್ದರು ಅವುಗಳನ್ನು ಕಬಳಿಸುವ ಸಲುವಾಗಿ ಸುಳ್ಳು ವಂಶಾವಳಿ ತೋರಿಸಿ ಸುಳ್ಳು ದಾವೆ ಸಲ್ಲಿಸಿ ಮೋಸದಿಂದ ಸದರಿ ರಾಜಿ ಡಿಕ್ರಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತು 1 ರಿಂದ 6 ನೇ ಆಸ್ತಿಗಳು 2 ನೇ ಪ್ರತಿವಾದಿಯ ತಂದೆ ಕನಕಗೌಡ ತಂದೆ ಭೀಮನಗೌಡರವರಿಗೆ ಸೇರಿದ ಆಸ್ತಿಗಳು ಎಂದರೆ ಸರಿಯಲ್ಲ. ಈ ದಾವೆಯಲ್ಲಿ ವಾದಿಗಳು ಸಲ್ಲಿಸಿದ ದಾಖಲಾತಿಗಳನ್ನು ಮತ್ತು 1 ನೇ ಪ್ರತಿವಾದಿ ಸಲ್ಲಿಸಿರುವ ತಕರಾರಿನ ಬಗ್ಗೆ ನನಗೆ ಗೊತ್ತಿರುವುದಿಲ್ಲ.

ಆರ್ ಆರ್ ಟಿ ಪ್ರಕರಣ ಸಂ. 39/1990-91 ರ ಆದೇಶ ದಿನಾಂಕ 31.12.1991 ರ ಬಗ್ಗೆ ದಾಖಲಾತಿ ಪಡೆದ ನಂತರ ತಿಳಿದುಕೊಂಡಿರುತ್ತೇನೆ. 4 ನೇ ದಾವಾ ಸ್ವತ್ತಿನ ಕುರಿತು 2 ನೇ ಪ್ರತಿವಾದಿ ಜಾಲವ್ವ ತನ್ನ ಮೊಮ್ಮಗ ಮಾಸಪ್ಪನಿಗೆ ದಿನಾಂಕ 28.08.2017 ರಂದು ಮೃತ್ಯು ಪತ್ರ ಬರೆದುಕೊಟ್ಟ ಬಗ್ಗೆ ನನಗೆ ಮಾಹಿತಿ ಇಲ್ಲ. 1 ನೇ ಪ್ರತಿವಾದಿಯ ಮಗ ಮಾಸಪ್ಪ ಮತ್ತು ಗ್ಯಾನಪ್ಪನ ಪತ್ನಿಯರಾದ

ಶರಣವ್ವ ಮತ್ತು ಮಾಸವ್ವರವರ ಮದ್ಯೆ ಇದೆ ನ್ಯಾಯಾಲಯದಲ್ಲಿ 4 ನೇ ದಾವಾ ಸ್ವತ್ತಿನ ಕುರಿತು ಪ್ರಕರಣ ನಡೆದ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ದಾವೆಯಲ್ಲಿ 1 ನೇಪ್ರತಿವಾದಿಯ ಮಗನ ಪರವಾಗಿ ಆದೇಶವಾಗಿರುವ ವಿಚಾರ ನನಗೆ ಗೊತ್ತಿದ್ದರು ಕೂಡಾ ಸದರಿ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ತೀರ್ಪಿನ ವಿರುದ್ಧ ಮಾಸವ್ವ ಆರ್ ಎ ನಂ. 31/2024 ರಂತೆ ಅಫೀಲು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅಫೀಲು ದಿನಾಂಕ 27.09.2025 ರಂದು ವಜಾ ಆಗಿರುವ ವಿಚಾರ ನನಗೆ ಗೊತ್ತಿದ್ದರು ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ತಿರ್ಪಿನಂತೆ ಮಾಸಪ್ಪನ ಹೆಸರಿನಲ್ಲಿ 4 ನೇ ದಾವಾ ಸ್ವತ್ತಿನ ಖಾತೆ ಬದಲಾವಣೆಗೆ ಆರ ಆರ್ ಟಿ ನಂ. 105/2024-2025 ರ ಪ್ರಕರಣದಲ್ಲಿ ದಿನಾಂಕ 05.07.2024 ರಂದು ಆದೇಶವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈಗ 4 ನೇ ದಾವಾ ಸ್ವತ್ತಿನ ಖಾತೆಯು ಮಾಸಪ್ಪನ ಹೆಸರಿನಲ್ಲಿ ಪಹಣಿ ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ.

ಸಾಕ್ಷಿಗೆ 4 ನೇ ದಾವಾ ಸ್ವತ್ತಿನ ಮ್ಯುಟೇಶನ ಪ್ರತಿ ಮತ್ತು ಪಹಣಿಯನ್ನು ತೋರಿಸಿದ್ದು ಸಾಕ್ಷಿಯ ಅವುಗಳನ್ನು ಒಪ್ಪಿಕೊಂಡ ಮೇರೆಗೆ ಅವುಗಳನ್ನು ನಿಡಿ- 101 ಮತ್ತು 102 ಎಂದು ಗುರುತಿಸಲಾಯಿತು. 4 ನೇ ದಾವಾ ಸ್ವತ್ತಿಗೆ 1 ನೇ ಪ್ರತಿವಾದಿಯ ಮಗನೇ ಮಾಲೀಕರಾಗಿ ಸ್ವಾಧೀನ ಮಾಡುತ್ತಿರುವುದರಿಂದ ಸದರಿ ಸ್ವತ್ತಿನಲ್ಲಿ ವಾದಿಗಾಗಲೀ , ಉಳಿದ ಪ್ರತಿವಾದಿಗಳಿಗಾಗಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಬಾಳವ್ವಳಿಗೆ ಸಂಬಂಧಿಸಿದ ಆಸ್ತಿಗಳು ಎಂದು ನನ್ನ ಪ್ರತಿವಾದ ಪತ್ರದಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆಯ ಪತ್ರದಲ್ಲಿ ಹೇಳಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳು ಬಾಳವ್ವಳ ಸ್ತ್ರಿದನ ಆಸ್ತಿಗಳು ಇರುವುದಿಲ್ಲ ಮತ್ತು ಸದರಿ ಆಸ್ತಿಗಳಿಗೆ ಅವರು ಮಾಲೀಕಳು ಮತ್ತು ಸ್ವಾಧೀನದಾರಳು

ಇರಲಿಲ್ಲ ಎಂದರೆ ಸರಿಯಲ್ಲ. ಸುಳ್ಳು ವಂಶಾವಳಿಯನ್ನು ತೋರಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನಾನಾಗಲಿ , ಉಳಿದ ಪ್ರತಿವಾದಿ ನಂ. 3 ರಿಂದ 6 ರವರಿಗಾಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ದಿನಾಂಕ 26.02.1959 ರಲ್ಲಿ ಆದ ಹಕ್ಕು ಬದಲಾವಣೆಯ ಪ್ರಕಾರ ನನ್ನ ತಂದೆ ಹೆಸರಿಗೆ ದಾವಾ ಸ್ವತ್ತು ಸಂ. 1 ರಿಂದ 3 , 5 , 6 ಗಳ ಖಾತೆ ಬದಲಾವಣೆ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಜನ್ಮ ದಿನಾಂಕದ ಕುರಿತು ದಾಖಲಾತಿಗಳು ಇರುವುದಿಲ್ಲ. ನನ್ನ ತಂದೆ ಮರಣಹೊಂದಿದ ಕಾಲಕ್ಕೆ ಅವರಿಗೆ 78 ವರ್ಷ ವಯಸ್ಸು ಆಗಿತ್ತು ಈ ಕುರಿತು ದಾಖಲಾತಿ ಇರುವುದಿಲ್ಲ. ದಿನಾಂಕ 26.02.1959 ರ ಹಕ್ಕು ಬದಲಾವಣೆಯಲ್ಲಿರುವ ಹೆಸರು 2 ನೇ ಪ್ರತಿವಾದಿ ಜಾಲವ್ವಳ ತಂದೆ ಕನಕಗೌಡ ತಂದೆ ಭೀಮನಗೌಡ ಇದ್ದು , ನಮ್ಮ ತಂದೆಯ ಹೆಸರು ಒಂದೆ ಇರುವುದನ್ನು ದುರುಪಯೋಗಪಡಿಸಿಕೊಂಡು ಮೇಲ್ಕಂಡ ಆಸ್ತಿಗಳು ನಮಗೆ ಸಂಬಂಧಿಸಿದ್ದು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಹಕ್ಕು ಬದಲಾವಣೆಯಲ್ಲಿ 4 ನೇ ದಾವಾ ಸ್ವತ್ತಿನ ಕುರಿತು ನಜರ ಚೂಕಿನಿಂದ ಹಕ್ಕು ಬದಲಾವಣೆ ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಗೆ ಸಂಬಂಧಿಸಿದಂತೆ ಆರ್ ಆರ್ ಟಿ ಪ್ರಕರಣದ ಪ್ರಕಾರ ಜಾಲವ್ವಳ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಖಾತೆಯು ಜಾಲವ್ವ ಮರಣಹೊಂದುವವರೆಗೆ ಅವರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ಸದರಿ ಆಸ್ತಿಯ ಖಾತೆಯು ನನ್ನ ಅಜ್ಜಿ ಮಾಸವ್ವ ಗಂಡ ಭೀಮನಗೌಡರ ಹೆಸರಿನಲ್ಲಿತ್ತು. ಸದರಿ ಹೆಸರಿನಲ್ಲಿರುವ ಪಹಣಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ಆಸ್ತಿಯು 1 ನೇ ಪ್ರತಿವಾದಿಯ ಕುಟುಂಬಕ್ಕೆ ಸಂಬಂಧಿಸಿದ ಆಸ್ತಿಯಾಗಿದ್ದು ಸದರಿ ಆಸ್ತಿ ಕುರಿತು ಓ ಎಸ ನಂ.

332/2016 ರ ಪ್ರಕರಣದಲ್ಲಿ ರಾಜೀ ಡಿಕ್ರಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ರಾಜಿ ಡಿಕ್ರಿಯು ಕಾನೂನು ಬದ್ದವಾಗಿದ್ದು ಅದನ್ನು ಪ್ರಶ್ನಿಸುವ ಹಕ್ಕು ನಮಗೆ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ 11 ನೇ ಕಂಡಿಕೆಯಲ್ಲಿ ಹೇಳಿರುವ ವಿಚಾರವನ್ನು ನಾನೇ ಹೇಳಿ ಬರೆಸಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಕಂಡಿಕೆ 13 ರಲ್ಲಿ ಹೇಳಿರುವಂತೆ ನಮ್ಮ ಕುಟುಂಬದ ಸದಸ್ಯರು ರಾಜೀ ಡಿಕ್ರಿಯ ನಂತರ ದುಡಿಯಲು ಹೋಗಿದ್ದರಿಂದ ಮ್ಯುಟೇಶನ ಮಾಡಿಸಿಕೊಂಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯ ಕಂಡಿಕೆ 13 ರಲ್ಲಿ ಹೇಳಿರುವಂತೆ ಮೃತ್ಯು ಪತ್ರದ ಬಗ್ಗೆ ಹೇಳಿ ಬರೆಸಿರುತ್ತೇನೆ. ನಾನು ಮತ್ತು 1 ನೇ ವಾದಿ ಸೇರಿ ಈ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ವಾದಿ ಸಲ್ಲಿಸಿದ ದಾವೆಯಲ್ಲಿನ ನ್ಯೂನ್ಯತೆಗಳನ್ನು ಸರಿ ಪಡಿಸುವ ಸಲುವಾಗಿ ನಾನು ಪ್ರತಿವಾದಿಯಾಗಿ ಬಂದು ಸುಳ್ಳು ಪ್ರತಿ ಪರಿಹಾರ ಕೋರಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ .

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು, ಕುಷ್ಟಗಿ**